ದಿನಾಂಕಃ 16.01.2019 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ಮಾಡಿಸಲಾಯಿತು.

ಮುಖ್ಯ ವಿಚಾರಣೆಃ ಶ್ರೀ.ಬಿವೈಆರ್ ವಕೀಲರಿಂದ ಅರ್ಜಿದಾರರ ಪರವಾಗಿ.

ನನ್ನ ಮುಖ್ಯವಿಚಾರಣೆಯಾಗಿ ಹಾಜರುಪಡಿಸಿರುವ ಪ್ರಮಾಣಪತ್ರದಲ್ಲಿ ಬರೆಯಲಾಗಿರುವ ಅಂಶಗಳು ನನಗೆ ತಿಳಿದಿದ್ದು ಸತ್ಯಾಂಶಗಳಿಂದ ಕೂಡಿರುತ್ತವೆ.

ಮುನಿಗೌಡ ಎನ್ನುವ ರೋಗಿಗೆ ಸಂಬಂದಪಟ್ಟ ಎರಡು ಹೊರರೋಗಿ ದಾಖಲೆ ಮತ್ತು ಒಳರೋಗಿ ದಾಖಲೆಯನ್ನು ಹಾಗೂ ಎರಡು ಕ್ಷ-ಕಿರಣಗಳನ್ನು ಹಾಜರುಪಡಿಸಿರುತ್ತೇನೆ ಅದನ್ನು ನಿಪಿಃ14 ರಿಂದ 16 ಎಂದು ಗುರುತಿಸಲಾಯಿತು.

ಪಾಟೀಸವಾಲುಃ ಶ್ರೀ.ಎಸ್‌ಎಮ್ ವಕೀಲರಿಂದ ಎದುರುದಾರರ ಪರವಾಗಿ.

ಅಪಘಾತ ವಾದ ತಕ್ಷಣ ಗಾಯಾಳು ನಮ್ಮ ಆಸ್ಪತ್ರೆಗೆ ದಾಖಲಾಗಿರುತ್ತಾರೆ. ಈ ಪ್ರಕರಣದಲ್ಲಿ ಎಮ್‌ಎಲ್‌ಸಿ ದಾಖಲಾಗಿರುತ್ತದೆ. ಆಸ್ಪತ್ರೆಯ ದಾಖಲೆಗಳಲ್ಲಿ ಬರೆದಿರುವಂತೆ ಗಾಯಾಳು ದ್ವಿಚಕ್ರ ವಾಹನದಲ್ಲಿ ಹೋಗುತ್ತಿರುವ ಲಾರಿಯು ಬಂದು ಅಪಘಾತಪಡಿಸಿದ್ದರಿಂದ ಗಾಯಗೊಂಡಿರುತ್ತಾರೆ ಎಂದು ವಿವರವನ್ನು ಬರೆಯಲಾಗಿರುತ್ತದೆ. ಆಸ್ಪತ್ರೆಯ ದಾಖಲೆಗಳಲ್ಲಿ ಅಪಘಾತಪಡಿಸಿದ ವಾಹನದ ನಂಬರನ್ನು ಬರೆದಿರುವುದಿಲ್ಲ. ಸಾಮಾನ್ಯವಾಗಿ ರೋಗಿಯ ಕಡೆಯವರು ವಾಹನದ ನಂಬರನ್ನು ತಿಳಿಸಿದರೇ ಬರೆಯಲಾಗುತ್ತದೆ. ನಾನು ವೈಯಕ್ತಿಕವಾಗಿ ಅರ್ಜಿದಾರರಿಗೆ ಚಿಕಿತ್ಸೆ ಕೊಟಿಟರುವುದಿಲ್ಲ ಮತ್ತು ಕೇವಲ ನ್ಯೂನತೆಯ ಪ್ರಮಾಣವನ್ನು ನಿರ್ದರಿಸಲು ಪರೀಕ್ಷೆ ಮಾಡಿರುತ್ತೇನೆ. ಚಿಕಿತ್ಸೆ ಕೊಟ್ಟಂತಹ ವೈದ್ಯರ ಕಡೆಯಿಂದ ನಾನು ನ್ಯೂನತೆಯ ಪ್ರಮಾಣಪತ್ರವನ್ನು ಪಡೆದುಕೊಂಡಿರುವುದಿಲ್ಲ. ಆಸ್ಪತ್ರೆಯ ದಾಖಲೆಗಳಂತೆ ರೋಗಿಗೆ ಹೊರಜೋಡಣೆಗಳನ್ನು ಜೋಡಿಸಲಾಗಿದ್ದು ಒಳಗಡೆ ಒಂದು ರಾಡ್‌ನ್ನು ಹಾಕಲಾಗಿರುತ್ತದೆ. ಹೊರಜೋಡಣೆಗಳನ್ನು ತೆಗೆಯಲಾಗಿದ್ದು ಒಳಗಡೆ ಹಾಕಲಾಗಿದ್ದ ರಾಡು ಹಾಗೆಯೇ ಇರುತ್ತದೆ. ನಾನು ಪರೀಕ್ಷೆ ಮಾಡುವ ಸಮಯದಲ್ಲಿ ಅರ್ಜಿದಾರರಿಗೆ ಆಗಿದ್ದ ಮೂಳೆ ಮುರಿತಗಳು ಕೂಡಿಕೊಂಡಿರುತ್ತದೆ. ಆಸ್ಪತ್ರೆಯಿಂದ ಬಿಡುಗಡೆ ಆದ ನಂತರ ಎಷ್ಟು ಬಾರಿ ಮುಂದುವರೆದ ಚಿಕಿತ್ಸೆಯನ್ನು ಪಡೆದುಕೊಂಡಿರುತ್ತಾರೆ ಎನ್ನುವುದು ನನಗೆ ಗೊತ್ತಿರುವುದಿಲ್ಲ. ನನ್ನ ಸಾಕ್ಷ್ಯದ

ಪ್ರಮಾಣಪತ್ರದಲ್ಲಿ ಕೊಟ್ಟಿರುವಂತಹ ಒಟ್ಟಾರೆ ಅಂಗನ್ಯೂನತೆಯ ಪ್ರಮಾಣದಲ್ಲಿ ಯಾವ ಯಾವ ಅಂಗದ ಕುರಿತಂತೆ ಕೊಡಲಾಗಿರುತ್ತದೆ ಎನ್ನುವುದನ್ನು ಪ್ರತ್ಯೇಕವಾಗಿ ತೋರಿಸಿರುವುದಿಲ್ಲ ಎಂದರೆ ಸರಿ. ಸಾಕ್ಷಿ ಸ್ವತಃ ಅದನ್ನು ಹೊರರೋಗಿ ಪರೀಕ್ಷಾ ಚೀಟಿಯಲ್ಲಿ ತೋರಿಸಿರುತ್ತೇನೆ ಎಂದು ತಿಳಿಸಿರುತ್ತಾರೆ. ನಾನು ಇತ್ತೀಚಿನ ಕೇಂದ್ರ ಸರ್ಕಾರದ ಮಾರ್ಗಸೂಚಿಗಳನ್ನು ಅನುಸರಿಸಿ ನ್ಯೂನತೆಯ ಪ್ರಮಾಣನಮ್ನು ನಿರ್ದರಿಸಿರುತ್ತೇನೆ. ನಾನು ಯೂವುದೇ ಸರಿಯಾದ ಆಧಾರ ಇಲ್ಲದೇ ಅರ್ಜಿದಾರರ ದೈಹಿಕ ಅಂಗನ್ಯೂತೆಯ ಪ್ರಮಾಣವನ್ನು ಹೆಚ್ಚಿನ ರೀತಿಯಲ್ಲಿ ತೋರಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಅರ್ಜಿದಾರರಿಗೆ ಯಾವುದೇ ಚಿಕಿತ್ಸೆಯನ್ನು ಕೊಡದೇ ಇರುವುದರಿಂದ ನ್ಯೂನತೆಯ ಪ್ರಮಾಣವನ್ನು ನಿರ್ದರಿಸಲು ಸಮರ್ಥನಾದ ವೈದ್ಯನಾಗಿರುವುದಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಮುಂದುವರೆದ ಚಿಕಿತ್ಸೆಗಾಗಿ ರೂ.50,000-00 ಅವಶ್ಯಕತೆ ಇರುತ್ತದೆ ಎನ್ನುವ ಕುರಿತಂತೆ ಯಾವುದೇ ಪ್ರಮಾಣಪತ್ರವನ್ನು ಕೊಟ್ಟಿರುವುದಿಲ್ಲ. ಒಳಜೋಡಣೆಗಳನ್ನು ತೆಗೆಯಿಲು ಒಂದು ಆಸ್ಪತ್ರೆಯಿಂದ ಮತ್ತೊಂದು ಆಸ್ಪತ್ರೆಯಲ್ಲಿ ಖರ್ಚು ವ್ಯತ್ಯಾಸ ಆಗುತ್ತದೆ ಎಂರದೆ ಸರಿ. ನಾನುಹ ೀಳುವಂತೆ ಮುಂದುವರೆದ ಚಿಕಿತ್ಸೆಗಾಗಿ ರೂ.50,000-00 ಅವಶ್ಯಕತೆ ಇರುವುದಿಲ್ಲ ಎಂದರೆ ಸರಿಯಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸ ಇದೆ

15ನೇ ಅಪರ ನ್ಯಾಯಾಧೀಶರು
ಮತ್ತು ಎಂಎಸಿಟಿ